BHARATH INSTITUTE OF SCHOOLING EDUCATION®
Approved and Recognised by Government of Karnataka
An ISO 9001 - 2015 certified Organisation

ಸಂಖ್ಯೆ:,BISE/SSC-12th Class/ Dec- Exam- Result/02/2022-23 ದಿನಾಂಕ: 27.01.2023

***ಸುತ್ತೋಲೆ***

**ವಿಷಯ: 2022 ರ ಡಿಸೆಂಬರ್ ಮಾಹೆಯಲ್ಲಿ ಭಾರತ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು ಸಂಸ್ಥೆಯ ವತಿಯಿಂದ ನಡೆದ ಸೀನಿಯರ್ ಸೆಕೆಂಡರಿ (12ನೇ ತರಗತಿ) ಪರೀಕ್ಷೆಯ ಫಲಿತಾಂಶ ಪ್ರಕಟಣೆಯ ಕುರಿತು.**

******

ಡಿಸೆಂಬರ್ 2022 ರ ಮಾಹೆಯಲ್ಲಿ ನಡೆದ ಸೀನಿಯರ್ ಸೆಕೆಂಡರಿ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ; 27.01.2023 ರಂದು ಪೂರ್ವಾಹ್ನ 11 ಗಂಟೆಯ ನಂತರ ಮಂಡಳಿಯ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು. ಹಾಗೂ ದಿನಾಂಕ:29.01.2023 ರಂದು ಸಂಬಂಧಿಸಿದ ಕಲಿಕಾ ಕೇಂದ್ರಗಳಲ್ಲಿ ಫಲಿತಾಂಶವನ್ನು ಪ್ರಕಟಿಸಲಾಗುವುದು. ಫಲಿತಾಂಶ ಪ್ರಕಟಣೆಯಾದ 15 ದಿನದೊಳಗೆ ತಿದ್ದುಪಡಿ ಇದ್ದಲ್ಲಿ ನಿಯಮಾನುಸಾರ ತಿದ್ದುಪಡಿ ಮಾಡಲಾಗುವುದು. ವಿಶೇಷ ಪರಿಸ್ಥಿತಿಯಲ್ಲಿ ಅಂದರೆ ಪರೀಕ್ಷೆಯ ದುರಾಚರಣೆ, ವಂಚನೆ, ಅನುಚಿತ ವರ್ತನೆ ಮೊದಲಾದವುಗಳಿಂದ ಪ್ರಭಾವಿತವಾಗಿದೆ,P ಎಂದು ಕಂಡುಬಂದಲ್ಲಿ ಅಂತಹ ಫಲಿತಾಂಶವನ್ನು ಪ್ರಕಟವಾದ ನಂತರವೂ ನಿಯಮಾನುಸಾರ ಪರೀಕ್ಷಾ ಪಲಿತಾಂಶವನ್ನು ತಡೆಹಿಡಿಯುವ, ರದ್ದು ಪಡಿಸುವ, ಮಾರ್ಪಡಿಸಿ ಪ್ರಕಟಿಸುವ, ಅಧಿಕಾರವನ್ನು ಸಂಸ್ಥೆಯು ಹೊಂದಿರುತ್ತದೆ.

**ಡಿಸೆಂಬರ್ 2022 ರ ಸೀನಿಯರ್ ಸೆಕೆಂಡರಿ ಪರೀಕ್ಷೆಯ ಫಲಿತಾಂಶ ಪಟ್ಟಿಯನ್ನು ಸಂಸ್ಥೆಯ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಅಪ್ಲೋಡ್ ಮಾಡಿಕೊಂಡು ಈ ಕೆಳಕಂಡ ಅಂಶಗಳ ಆಧಾರದ ಮೇಲೆ ನಿಮ್ಮ ಕಲಿಕಾ ಕೇಂದ್ರಗಳ (ಕಾಲೇಜು/ ಶಾಲಾ) ಎಲ್ಲಾ ಅಭ್ಯರ್ಥಿಗಳ ಫಲಿತಾಂಶವನ್ನು ಮತ್ತು ಇತರೆ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸಲು ತಿಳಿಸಿದೆ.**

1. ಡಿಸೆಂಬರ್ 2022ರ ಮಾಯೆಯಲ್ಲಿ ಸೀನಿಯರ್ ಸೆಕೆಂಡರಿ (12ನೇ ತರಗತಿ) ಪರೀಕ್ಷೆ ಬರೆದ ಎಲ್ಲಾ ಅಭ್ಯರ್ಥಿಗಳ ಫಲಿತಾಂಶ ಬಂದಿದೆಯೇ ? ಎಂಬುದನ್ನು ಪರಿಶೀಲಿಸಿಕೊಳ್ಳುವುದು.
2. ಒಂದು ವೇಳೆ ಯಾವುದಾದರೂ ಅಭ್ಯರ್ಥಿಗಳ ಫಲಿತಾಂಶ ಬಾರದಿದ್ದಲ್ಲಿ, ಫಲಿತಾಂಶ ತಡೆಹಿಡಿದಿದ್ದಲ್ಲಿ, ಫಲಿತಾಂಶ ಪ್ರಕಟಿಸಿದ 15 ದಿನದೊಳಗಾಗಿ ಸಕಾರಣಗಳೊಂದಿಗೆ ಸಂಸ್ಥೆಗೆ ಪತ್ರ ಬರೆದು ಫಲಿತಾಂಶ ಪಡೆದುಕೊಳ್ಳಲು ತಿಳಿಸಿದೆ ಫಲಿತಾಂಶ ಪ್ರಕಟಣೆಯಾಗಿ 15 ದಿನಗಳ ನಂತರ ಈ ಬಗ್ಗೆ ಯಾವುದೇ ಕೋರಿಕೆ ಬಂದಲ್ಲಿ ಅದನ್ನು ಸ್ವೀಕರಿಸಲಾಗುವುದಿಲ್ಲ ಮುಂದಿನ ಆಗು ಹೋಗುಗಳಿಗೆ ಕಲಿಕಾ ಕೇಂದ್ರದ ಪ್ರಾಂಶುಪಾಲರು/ ಸಮನ್ವಯಾಧಿಕಾರಿಗಳು ಜವಾಬ್ದಾರರಾಗಿರುತ್ತಾರೆ.
3. ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮ ದಿನಾಂಕ, ಹಾಗೂ ಇತ್ಯಾದಿ, ಸಣ್ಣ,ಪುಟ್ಟ ತಿದ್ದುಪಡಿಗಳಿದ್ದಲ್ಲಿ ಪ್ರಸ್ತಾವನೆಯನ್ನು ಪೂರಕ ದೃಢೀಕೃತ ದಾಖಲೆಗಳೊಂದಿಗೆ ರೂ 300/ ದಂಡ ಶುಲ್ಕವನ್ನು ಆನ್ಲೈನ್ ಮೂಲಕ ಸಲ್ಲಿಸಿ ಮೂಲ ಪ್ರತಿ ಯೊಂದಿಗೆ ಸಲ್ಲಿಸತಕ್ಕದ್ದು.
4. ಪ್ರಕಟಿಸಿದ ಫಲಿತಾಂಶ ತಾತ್ಕಾಲಿಕವಾಗಿದ್ದು ಅಭ್ಯರ್ಥಿಗೆ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು ಸಂಸ್ಥೆಯಿಂದ ನೀಡುವ ಅಂಕಪಟ್ಟಿಯು ಆಯಾ ಅಭ್ಯರ್ಥಿಯ ನೈಜ ಫಲಿತಾಂಶವನ್ನು ತಿಳಿಸುತ್ತದೆ. ಅಂದರೆ ಅಂಕಪಟ್ಟಿಯಲ್ಲಿ ನೀಡಿದ ದತ್ತಾಂಶಗಳು ಅಂತಿಮ ಎಂದು ಭಾವಿಸತಕ್ಕದ್ದು.

BHARATH INSTITUTE OF SCHOOLING EDUCATION (R) Bengaluru

+91 9513855009 | +91 9513585009
BISE #52/2, Sharada Arcade, Maruthi Farm, Dombarahalli, Lakshmipura Post
Dasanapura Hobli, Bengaluru - 562162.
www.bise.edu.in Email : info@bise.edu.in

ಸದರಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಛಾಯಾ ಪ್ರತಿ ಗಾಗಿ ಮರು ಎಣಿಕೆಗಾಗಿ ಹಾಗೂ ಮರು ಮೌಲ್ಯಮಾಪನಕ್ಕಾಗಿ ಆನ್ಲೈನ್ ಮೂಲಕ ನಿಗದಿತ ಅರ್ಜಿ ಸಲ್ಲಿಸುವ ವೇಳಾಪಟ್ಟಿ ಈ ಕೆಳಕಂಡಂತಿದೆ.

| ವಿವರ | ದಿನಾಂಕ |
|---|---|
| ಡಿಸೆಂಬರ್ 2022ರ ಸೀನಿಯರ್ ಸೆಕೆಂಡರಿ( 12ನೇ ತರಗತಿ) ಪರೀಕ್ಷೆಯ ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿಯನ್ನು ಪಡೆಯಲು ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ | 02.02.2023 |
| ಡಿಸೆಂಬರ್ 2022ರ ಸೀನಿಯರ್ ಸೆಕೆಂಡರಿ (12ನೇ ತರಗತಿ) ಪರೀಕ್ಷೆಯ ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿಯನ್ನು ಪಡೆಯಲು ಅಂತಿಮ ದಿನಾಂಕ | 05.02.2023 |
| ಡಿಸೆಂಬರ್ 2022ರ ಸೀನಿಯರ್ ಸೆಕೆಂಡರಿ (12ನೇ ತರಗತಿ) ಪರೀಕ್ಷೆಯ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ/ ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ | 02.02.2023 |
| ಡಿಸೆಂಬರ್ 2022ರ ಸೀನಿಯರ್ ಸೆಕೆಂಡರಿ (12ನೇ ತರಗತಿ) ಪರೀಕ್ಷೆಯ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ/ ಅಂಕಗಳ ಮರು ಎಣಿಕೆಗೆ ಮರುಗಣಿಕೆಗೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ | 10.02.2023 |

ಮರು ಎಣಿಕೆಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಸಂಬಂಧಪಟ್ಟ ವಿಷಯದ ಉತ್ತರ ಪತ್ರಿಕೆಯ ಪ್ರತಿಯನ್ನು ಪಡೆಯಬೇಕಾಗಿರುತ್ತದೆ ನೇರವಾಗಿ ಅರ್ಜಿ ಸಲ್ಲಿಸುವಂತಿಲ್ಲ ಛಾಯಾ ಪ್ರತಿಯನ್ನು ಪಡೆದ ನಂತರ ಅಂಕಗಳ ಎಣಿಕೆಯಲ್ಲಿ ವ್ಯತ್ಯಾಸವಿದ್ದಲ್ಲಿ ಖಚಿತಪಡಿಸಿಕೊಂಡ ನಂತರವೇ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಿ ಸರಿಪಡಿಸಿಕೊಳ್ಳಬೇಕಾಗುತ್ತದೆ ಅಂಕಗಳ ಎಣಿಕೆಯಲ್ಲಿ ವ್ಯತ್ಯಾಸವಿದ್ದಲ್ಲಿ ಪರಿಶೀಲಿಸಿ ಸಂಸ್ಥೆಯ ವೆಚ್ಚದಲ್ಲಿ ಪರೀಕ್ಷಿತ ಫಲಿತಾಂಶ ಪಟ್ಟಿಯನ್ನು ಸಂಬಂಧಿಸಿದ ಕಲಿಕಾ ಕೇಂದ್ರಗಳಿಗೆ(ಕಾಲೇಜು/ಶಾಲಾ) ಹಾಗೂ ಈ ಬಗ್ಗೆ ಮಾಹಿತಿಯನ್ನು ಅಭ್ಯರ್ಥಿಗಳಿಗೆ ರವಾನಿಸಲಾಗುವುದು ಹಾಗೂ ಆರು ಅಂಕಗಳಿಗಿಂತ ಹೆಚ್ಚು ವ್ಯತ್ಯಾಸವಾಗಿದ್ದಲ್ಲಿ ಶುಲ್ಕವನ್ನು ಅಭ್ಯರ್ಥಿಗಳಿಗೆ ಹಿಂದಿರುಗಿಸಲಾಗುವುದು.

ಛಾಯಾ ಪ್ರತಿ ಹಾಗೂ ಮರುಮೌಲ್ಯಮಾಪನಕ್ಕಾಗಿ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದು ಭೌತಿಕವಾಗಿ ಅರ್ಜಿಗಳನ್ನು ಸ್ವೀಕರಿಸುವುದನ್ನು ರದ್ದುಪಡಿಸಲಾಗಿದೆ. ಮರು ಎಣಿಕೆ ಅಥವಾ ಮರು ಮೌಲ್ಯಮಾಪನ ಸೇವೆಯನ್ನು ಪಡೆಯಬೇಕಾದಲ್ಲಿ ಛಾಯಾಪ್ರತಿಯನ್ನು ಕಡ್ಡಾಯವಾಗಿ ಪಡೆಯಬೇಕಾಗಿರುತ್ತದೆ. ಛಾಯಾಪ್ರತಿ ಮತ್ತು ಮರು ಮೌಲ್ಯಮಾಪನಕ್ಕಾಗಿ ಆನ್ಲೈನ್ನಲ್ಲಿ ಅರ್ಜಿ ಸಲ್ಲಿಸಲು ಸಂಸ್ಥೆಯ ಜಾಲತಾಣದ ವಿಳಾಸ www.bise.edu.in ದಲ್ಲಿ ಲಭ್ಯವಿದ್ದು ಸದರಿ ಜಾಲತಾಣದಲ್ಲಿ ಆನ್ಲೈನ್ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ ಆನ್ಲೈನಲ್ಲಿ ಅರ್ಜಿ ಸಲ್ಲಿಸಿದ ನಂತರ ನಿಗದಿತ ಶುಲ್ಕವನ್ನು ಡೆಬಿಟ್ ಕಾರ್ಡ್/ ಕ್ರೆಡಿಟ್ ಕಾರ್ಡ್ ಮೂಲಕ ಪಾವತಿಸಬಹುದಾಗಿದೆ ಛಾಯಾ ಪ್ರತಿ /ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿದ ನಂತರ ಅರ್ಜಿ ಸ್ವೀಕಾರವಾದ ಬಗ್ಗೆ ನೋಂದಾಯಿಸಿದ ಮೊಬೈಲ್ ಸಂಖ್ಯೆಗೆ ಎಸ್ಎಂಎಸ್ ಮುಖಾಂತರ ಮಾಹಿತಿ ರವಾನೆ ಯಾಗುತ್ತದೆ.

ಮೇಲೆ ತಿಳಿಸಿರುವಂತೆ ಎಲ್ಲಾ ವಿಷಯಗಳ ಅಥವಾ ಅಪೇಕ್ಷಿತ ವಿಷಯದ ಛಾಯಾಪ್ರತಿ ಪಡೆದ ಅಭ್ಯರ್ಥಿಗಳು ಉತ್ತರ ಪತ್ರಿಕೆಯ ಅಂಕಗಳ ಮರು ಎಣಿಕೆ/ ಮರು ಮೌಲ್ಯಮಾಪನಕ್ಕಾಗಿ ಆನ್ಲೈನ್ನಲ್ಲಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಈ ಕೆಳಕಂಡಂತೆ ನಿಗದಿ ಪಡಿಸಿದ ನಿಗದಿತ ಶುಲ್ಕದೊಡನೆ ಅರ್ಜಿ ಸಲ್ಲಿಸಬೇಕು. ನಿಗದಿತ ದಿನಾಂಕದ ನಂತರ ಮರು ಮೌಲ್ಯಮಾಪನಕ್ಕಾಗಿ ಬರುವ ಅರ್ಜಿಗಳು ಆನ್ಲೈನ್ ನಲ್ಲಿ ಸ್ವೀಕೃತವಾಗುವುದಿಲ್ಲ ಆನ್ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಸಂಬಂಧ ಸಂಸ್ಥೆಯ ಜಾಲತಾಣದಲ್ಲಿ ಫ್ಲೋ ಚಾರ್ಟ್ ಲಭ್ಯ ಮಾಡಲಾಗಿದೆ.

BHARATH INSTITUTE OF SCHOOLING EDUCATION(R) Bengaluru

| ಶುಲ್ಕದ ವಿವರ | |
|---|---|
| ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿ ಪಡೆಯಲು ಒಂದು ವಿಷಯಕ್ಕೆ ಶುಲ್ಕ | ರೂ 750/- |
| ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ ಶುಲ್ಕ ಒಂದು ವಿಷಯಕ್ಕೆ | ರೂ 900/- |
| ಉತ್ತರ ಪತ್ರಿಕೆಗಳ ಅಂಕಗಳ ಮರು ಎಣಿಕೆಗಾಗಿ (ಒಂದು ವಿಷಯಕ್ಕೆ) | ರೂ 200/- |

ಛಾಯಾ ಪ್ರತಿಯನ್ನು ಭೌತಿಕವಾಗಿ ಅಂಚೆ ಮೂಲಕ ಅರ್ಜಿಯಲ್ಲಿ ನಮೂದಿಸಿದ ವಿಳಾಸಕ್ಕೆ ರವಾನಿಸುವ ಕಾರ್ಯವನ್ನು ಕೈ ಬಿಡಲಾಗಿದೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡಿ ಅಪ್ಲೋಡ್ ಮಾಡಲಾಗುವುದು. ಉತ್ತರ ಪತ್ರಿಕೆಗಳನ್ನು ಅಪ್ಲೋಡ್ ಮಾಡಿದ ಮಾಹಿತಿಯನ್ನು ಅಭ್ಯರ್ಥಿಗಳು ಅರ್ಜಿಯಲ್ಲಿ ನೀಡಿರುವ ಮೊಬೈಲ್ ಸಂಖ್ಯೆಗೆ ರವಾನಿಸಲಾಗುವುದು. ಸದರಿ ಮಾಹಿತಿಯ ಸೀಕೃತವಾದ ನಂತರ ಅಭ್ಯರ್ಥಿಗಳು ಉತ್ತರ ಪತ್ರಿಕೆಯನ್ನು ಮೇಲ್ಕಾಣಿಸಿದ ಜಾಣತಾಣದಿಂದ ಅಪ್ಲೋಡ್ ಮಾಡಿಕೊಳ್ಳಬಹುದಾಗಿದೆ.

ಅಭ್ಯರ್ಥಿಗಳು ಉತ್ತರ ಪತ್ರಿಕೆಗಳ ಅಂಕಗಳ ಮರು ಎಣಿಕೆ ಅಥವಾ ಮರು ಮೌಲ್ಯಮಾಪನ ಅಪೇಕ್ಷಿಸಿದ್ದಲ್ಲಿ ಆನ್ಲೈನ್ ಮೂಲಕ ನಿಗದಿತ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಬಹುದಾಗಿದೆ ಮರು ಎಣಿಕೆ ಅಥವಾ ಮರು ಮೌಲ್ಯಮಾಪನದ ನಂತರ ಅಂಕಗಳ ಮಾಹಿತಿಯನ್ನು ನೋಂದಾಯಿತ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ರವಾನಿಸಲಾಗುವುದು ಹಾಗೂ ಅಂಕಗಳಲ್ಲಿ ವ್ಯತ್ಯಾಸವಾದಲ್ಲಿ ಪರೀಕ್ಷಿತ ಫಲಿತಾಂಶ ಪಟ್ಟಿಯನ್ನು ಕಲಿಕಾ ಕೇಂದ್ರಗಳಿಗೆ (ಕಾಲೇಜು/ಶಾಲಾ) ಕಳುಹಿಸಲಾಗುವುದು.

ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಸುತ್ತೋಲೆಯ ಜೆರಾಕ್ಸ್ ಪ್ರತಿಯನ್ನು ಮತ್ತು ಪರೀಕ್ಷಾ ಫಲಿತಾಂಶ ಪಟ್ಟಿಯನ್ನು ಸಕಾಲದಲ್ಲಿ ಸಂಬಂಧಿಸಿದ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು ಸಂಸ್ಥೆಯ ಅಡಿಯಲ್ಲಿ ಬರುವ ಎಲ್ಲಾ ಕಲಿಕ ಕೇಂದ್ರಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ. ಡಿಸೆಂಬರ್ 2022ರ ಸೀನಿಯರ್ ಸೆಕೆಂಡರಿ (12ನೇ ತರಗತಿ) ಪರೀಕ್ಷೆಯ ಫಲಿತಾಂಶವನ್ನು www.bise.edu.in ಅಂತರ್ಜಾಲದಲ್ಲಿ ದಿನಾಂಕ: 27.01.2023 ರಂದು ಪೂರ್ವಾಹ್ನ 11 ಗಂಟೆಯ ನಂತರ ಪ್ರಕಟಿಸಲಾಗುವುದು.

Manjula

ವ್ಯವಸ್ಥಾಪಕ ನಿರ್ದೇಶಕರು
ವ್ಯವಸ್ಥಾಪಕ ನಿರ್ದೇಶಕರು
ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ)
ಬೆಂಗಳೂರು

BHARATH INSTITUTE OF SCHOOLING EDUCATION(R) Bengaluru

ಸೂಕ್ತ ಕ್ರಮಕ್ಕಾಗಿ

1. ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ ) ಬೆಂಗಳೂರು ಸಂಸ್ಥೆಯ ಅಡಿಯಲ್ಲಿ ಬರುವ ಎಲ್ಲಾ ಕಲಿಕಾ (ಕಾಲೇಜು/ಶಾಲಾ)ಕೇಂದ್ರಗಳ ಪ್ರಾಂಶುಪಾಲರು/ ಮುಖ್ಯೋಪಾಧ್ಯರು//ಸಮನ್ವಯಾಧಿಕಾರಿಗಳು ಸಂಸ್ಥೆಯ ಲಾಗಿನ್ ನ್ನಲ್ಲಿ ಫಲಿತಾಂಶಪಟ್ಟಿಯನ್ನು ಸಕಾಲದಲ್ಲಿ ಪಡೆದು ಪ್ರಕಟಿಸುವಂತೆ ಕ್ರಮವಹಿಸುವುದು.
2. ಜಿಲ್ಲಾ/ವಿಭಾಗಾಧಿಕಾರಿಗಳು ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ ) ಬೆಂಗಳೂರು
3. ಪ್ರಾಂಶುಪಾಲರು /ಡೀನ್ ರವರು ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ ) ಬೆಂಗಳೂರು
4. ಗೌರ್ನಿಂಗ್ ಕೌನ್ಸಿಲ್. ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ ) ಬೆಂಗಳೂರು
5. ಕಛೇರಿ ಪ್ರತಿ/ಶಾಖಾ ಕಡತ